# <u>ಕರ್ನಾಟಕ ವಿಧಾನ ಪರಿಷತ್ತು</u>

| | |
|---|---|
| ವಿಧಾನ ಪರಿಷತ್ ಸದಸ್ಯರ ಹೆಸರು | ಶ್ರೀ ಬಸನಗೌಡ ಬಾದರ್ಲಿ |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 470 (542) |
| ಉತ್ತರಿಸಬೇಕಾದ ದಿನಾಂಕ | 30.01.2026 |
| **ಪ್ರಶ್ನೆಗಳು** | **ಉತ್ತರಗಳು** |
| ಅ) ಸಿಂಧನೂರು ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ ಜಲ ಜೀವನ್ ಮೀಷನ್ (ಜೆಜೆಎಂ) ಯೋಜನೆಯ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ; | ಜಲ್ ಜೀವನ್ ಮಿಷನ್ ಯೋಜನೆಯಡಿ ಹಾಗೂ NABARD Infrastructure Development Assistance (NIDA)ನ ನೆರವಿನಿಂದ ರಾಯಚೂರು ಜಿಲ್ಲೆಯ ಎಲ್ಲಾ 1406 ಗ್ರಾಮೀಣ ಜನವಸತಿಗಳಿಗೆ ಹಾಗೂ 7 ನಗರ ಸ್ಥಳೀಯ ಸಂಸ್ಥೆಗಳಾದ ಮಾನ್ವಿ, ಮಸ್ಕಿ, ಕವಿತಾಳ, ತುರ್ವಿಹಾಳ, ಬಾಳಗನೂರು, ಸಿರವಾರ, ಹಟ್ಟಿ ಪಟ್ಟಣಕ್ಕೆ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಯು ಅನುಮೋದನೆಯಾಗಿದ್ದು, ಪ್ರಸ್ತುತ ಯೋಜನೆಯ ಭೌತಿಕ ಪ್ರಗತಿಯು ಶೇ.70 ಆಗಿದ್ದು, ಆರ್ಥಿಕ ಪ್ರಗತಿಯು ಶೇ.53.35 ಆಗಿರುತ್ತದೆ.<br><br>ಮುಂದುವರೆದು, ಸಿಂಧನೂರು ತಾಲ್ಲೂಕಿನಲ್ಲಿ ಜಲ ಜೀವನ್ ಮಿಷನ್ (JJM) ಯೋಜನೆಯಡಿಯಲ್ಲಿ ಒಟ್ಟು 165 FHTC ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಇದರ ಪೈಕಿ 114 ಕಾಮಗಾರಿಗಳು ಪೂರ್ಣಗೊಂಡಿದ್ದು, 38 ಕಾಮಗಾರಿಗಳು ಟ್ರಯಲ್ ರನ್ ಹಂತದಲ್ಲಿದ್ದು, ಬಾಕಿ ಉಳಿದ 13 ಕಾಮಗಾರಿಗಳು ವಿವಿಧ ಹಂತದ ಪ್ರಗತಿಯಲ್ಲಿದ್ದು, ಶೀಘ್ರವಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. |

| | |
|---|---|
| ಆ) ಸದರಿ ಕಾಮಗಾರಿಯಿಂದ ತಾಲ್ಲೂಕಿಗೆ ಜನರಿಗೆ ಸೂಕ್ತ ಕುಡಿಯುವ ನೀರಿನ ಪೂರೈಕೆಯಾಗುತ್ತಿದೆಯೆ; | ರಾಯಚೂರು ಜಿಲ್ಲೆಯ DBOT ಯೋಜನೆಯ ಗುತ್ತಿಗೆದಾರರಿಗೆ ಮಾರ್ಚ್ -2026ರ ಅಂತ್ಯದೊಳಗೆ MBR-1 ಅಡಿಯಲ್ಲಿ ಬರುವ ಲಿಂಗಸೂಗೂರು ತಾಲ್ಲೂಕಿನ 176 ಜನವಸತಿಗಳಿಗೆ, ಸಿಂಧನೂರು ತಾಲ್ಲೂಕಿನ 244 ಜನವಸತಿಗಳಿಗೆ ಮತ್ತು ಮಾನ್ವಿ ತಾಲ್ಲೂಕಿನ 32 ಜನವಸತಿಗಳಿಗೆ ಒಟ್ಟಾರೆಯಾಗಿ 452 ಜನವಸತಿಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಗುರಿಯನ್ನು ನೀಡಲಾಗಿದೆ. ಗುತ್ತಿಗೆದಾರರು ಜೂನ್ 2026ರವರೆಗೆ ಕಾಲಾವಧಿ ವಿಸ್ತರಣೆ ಕೋರಿದ್ದು, ಯೋಜನೆಯನ್ನು ಜೂನ್ 2026ರೊಳಗೆ ಪೂರ್ಣಗೊಳಿಸಿ ಯೋಜಿತ ಎಲ್ಲಾ ಜನವಸತಿಗಳಿಗೆ ಶುದ್ಧ ಕುಡಿಯುವ ನೀರನ್ನು ಒದಗಿಸಲು ಯೋಜಿಸಿದೆ.<br><br>ಹಾಗೂ (JJM) ಯೋಜನೆಯಡಿಯಲ್ಲಿ ಪೂರ್ಣಗೊಂಡ 114 FHTC ಕಾಮಗಾರಿಗಳಿಂದ 114 ಜನವಸತಿ ಪ್ರದೇಶಗಳಿಗೆ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 51 ಜನವಸತಿ ಪ್ರದೇಶಗಳಿಗೆ ಹಾಲಿ ಇರುವ ಗ್ರಾಮ ಪಂಚಾಯತಿ ವ್ಯವಸ್ಥೆಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಸದರಿ ಎಲ್ಲಾ FHTC ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಿ ಶುದ್ಧ ಕುಡಿಯುವ ನೀರನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ. |
| ಇ) ಜೆಜೆಎಂ ಕಾಮಗಾರಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ? | ರಾಯಚೂರು ಜಿಲ್ಲೆಯ DBOT ಯೋಜನೆಯ ಅಂದಾಜು ಮೊತ್ತವು ರೂ.2978.00ಕೋಟಿಗಳಾಗಿದ್ದು, ಸಿಂಧನೂರು ತಾಲ್ಲೂಕಿಗೆ ಪ್ರತ್ಯೇಕವಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ಯೋಜನೆಗೆ ಒಟ್ಟಾರೆಯಾಗಿ ಇಲ್ಲಿಯವರೆಗೆ ರೂ.1367.00ಕೋಟಿಗಳ ಅನುದಾನ ಬಿಡುಗಡೆಯಾಗಿರುತ್ತದೆ.<br><br>ಹಾಗೂ 165 FHTC ಕಾಮಗಾರಿಗಳಿಗೆ ಒಟ್ಟು ರೂ. 14373.36 ಲಕ್ಷಗಳು ಅಂದಾಜು ಮೊತ್ತವಾಗಿದ್ದು, ಒಟ್ಟು ಇಲ್ಲಿಯವರೆಗೆ ರೂ.7561.97 ಲಕ್ಷಗಳು ಬಿಡುಗಡೆಯಾಗಿರುತ್ತದೆ. |
| ಈ) ಜೆಜೆಎಂ ಕಾಮಗಾರಿ ಗುಣಮಟ್ಟವು ಕಳಪೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಯಚೂರು ಜಿಲ್ಲೆಯ DBOT ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕಾಮಗಾರಿಯನ್ನು ಅನುಮೋದಿತ ವಿನ್ಯಾಸದಂತೆ ಅನುಷ್ಠಾನಗೊಳಿಸಿರುವ ಬಗ್ಗೆ, |

| | |
|---|---|
| ಉ) ಬಂದಿದಲ್ಲಿ, ಈ ಸಂಬಂಧ ಸರ್ಕಾರದಿಂದ ಯಾವ ಕ್ರಮ ವಹಿಸಲಾಗಿದೆ? | ಕಾಮಗಾರಿಯ ಪ್ರಗತಿ ಹಾಗೂ ಗುಣಮಟ್ಟವನ್ನು PMC ವತಿಯಿಂದ ಪರಿಶೀಲನೆ ಮಾಡಲಾಗುತ್ತಿದ್ದು, SQM ವತಿಯಿಂದ ಸಹ ಕಾಮಗಾರಿಯ ಪರಿಶೀಲನೆ ನಡೆಸಿ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಕ್ರಮವಹಿಸಲಾಗುತ್ತಿದೆ.<br><br>ಮುಂದುವರೆದು, ಜೆಜೆಎಂ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲು Third Party Agencyಯನ್ನು ಟೆಂಡರ್ ಮೂಲಕ ನೇಮಿಸಿಕೊಳ್ಳಲಾಗಿದ್ದು, ಸದರಿ Agency ವತಿಯಿಂದ ಮತ್ತು ರಾಜ್ಯ ಮಟ್ಟದಿಂದ SQM ತಂಡದವರು ಪರಿವೀಕ್ಷಣೆ ಕೈಗೊಳ್ಳಲಾಗುತ್ತಿದ್ದು, ಸದರಿ SQM ಮತ್ತು 3ನೇ ತಂಡದವರು ಕಾಮಗಾರಿಗಳನ್ನು ಪರಿಶೀಲಿಸುತ್ತಿದ್ದು, ಒಂದು ವೇಳೆ ಕಾಮಗಾರಿಯ ಅನುಷ್ಠಾನದಲ್ಲಿ ನ್ಯೂನ್ಯತೆಗಳು ಕಂಡುಬಂದಲ್ಲಿ ಸದರಿ ನ್ಯೂನತೆಗಳನ್ನು ಸರಿಪಡಿಸಲು ಕ್ರಮವಹಿಸಿ ಸಂಬಂಧಿಸಿದ ವೃತ್ತ ಕಛೇರಿಯ ಅಧೀಕ್ಷಕ ಅಭಿಯಂತರರಿಂದ ಕಾಮಗಾರಿಯನ್ನು ಮರು ಪರಿವೀಕ್ಷಣೆ ಮಾಡಿಸಿ ಕಾಮಗಾರಿ ಗುಣಮಟ್ಟ ಕಾಪಾಡಿಕೊಳ್ಳಲಾಗುತ್ತಿದೆ. |

RDWSD/CE/TECH/107/2025-26

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು